ಆ ಕೆರೆಗಳಲ್ಲಿ ನಿಲ್ಲದೆ ಇರುವುದಕ್ಕೆ, ಆ ಪ್ರದೇಶದಲ್ಲಿ ಸಾಕಷ್ಟು ಮಳೆ ಇಲ್ಲದಿರುವುದರ ಜೊತೆಗೆ ಮತ್ತೇನಾದರೂ ಕಾರಣವಿದೆಯೇ, ಎಂಬುದನ್ನು ತಾವು ಕಂಡು ಹಿಡಿದಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಇಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಕೆರೆಗೆ ಬರತಕ್ಕ ನೀರನ್ನು ಸರಿಯಾಗಿ ಬಿಡದೆ ತಡೆಯತಕ್ಕ ತೆಂಗಿನತೋಟಗಳು ಆ ಪ್ರದೇಶದಲ್ಲಿ ವಿಶೇಷವಾಗಿರುವುದರಿಂದ, ಆ ಕೆರೆಗಳಿಗೆ ಸರಿಯಾಗಿ ನೀರು ಸರಬರಾಯಿಯಾಗುತ್ತಿಲ್ಲವೆಂಬುದಾಗಿ, ಈ ಅಂಶವನ್ನು ರೈತರ ಪ್ರತಿನಿಧಿಗಳು ತಮ್ಮ ಗಮನಕ್ಕೆ ತಂದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಂದಿದ್ದಾರೆ. ನಾನೂ ಸಹ, ಚಿಕ್ಕನಾಯಕನಹಳ್ಳಿ, ತುರುವೇಕೆರೆ ಪ್ರಾಂತ್ಯ ಪ್ರವಾಸ ಹೋಗಿದ್ದಾಗ್ಯೆ ಈ ಅಂಶವನ್ನು ಕೇಳಿದಹಾಗೆ ಜ್ಞಾಪಕವಿದೆ. ಇದರಲ್ಲಿ ಬಂದಿರತಕ್ಕ ಒಂದು ಮುಖ್ಯ ತೊಡಕೇನೆಂದರೆ ಆ ತೆಂಗಿನ ತೋಟಗಳನ್ನು ಅಲ್ಲ ಹಾಗೆ ಬೆಳೆದು ಅನೇಕ ವರ್ಷಗಳಾಗಿದೆ. ಅವುಗಳನ್ನು ಈಗ ತಪ್ಪಿಸುವುದು ಬಹಳ ಕಠಿಣವಾದ ವಿಷಯ. ಅದನ್ನು ಬಹಳ ಎಚ್ಚರಿಕೆಯಿಂದ ನಡೆಸಬೇಕಾಗಿದೆ. ಇದು ಬಹಳ ಕ್ಲಿಷ್ಟಕರವಾದ ಸಮಸ್ಯೆ. ಹೀಗೇನೇ ಅನೇಕ ಕಡೆ ನೀರು ಬರುತ್ತಿದ್ದ ವ್ಯಾಲಗಳೇ ಇದರಿಂದ ಬದಲಾಗಿಹೋಗಿವೆ. ಈ ಎಲ್ಲ ಕಾರಣಗಳಿಂದ ಸರ್ಕಾರದವರು ಈ ಅಂಶಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ, ಒಂದು ನಲಹೆಯನ್ನು ಸರ್ಕಾರಕ್ಕೆ ನೀಡಲು ಒಂದು ಸಮಿತಿಯನ್ನು ನೇಮಕಮಾಡಬೇಕೆಂದಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ ಕೆರೆಗಳ ಹೂಳೆಕಿ ಯಾವುದು ಬಹಳ ತ್ವರಿತದಿಂದ ಆಗಬೇಕು, ಆ ಬಗ್ಯೆ ಆ ಕೆಲಸಗಳನ್ನು ಕೈಗೊಳ್ಳಲು ಎಷ್ಟು ಶಿಬ್ಬಂದಿ ಬೇಕಾಗುತ್ತದೆ ಎಂಬ ಇತ್ಯಾದಿ ಅಂಶಗಳನ್ನೆಲ್ಲಾ ನಿರ್ಧರಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಯಾಯ ಸಂದರ್ಭಗಳಿಗನುಸಾರವಾಗಿ ನೋಡಿ ನಡೆಸಲಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).— ಈ ಜಂಜರು ನಂಬರು 2 ರಲ್ಲಿ ನಮೂದಿಸಲಾಗಿರುವ ಹುಚ್ಚೇಗೌಡನ ಕಟ್ಟೆ, ಯಾರಿಗೆ ಸೇರಿದ ಕಟ್ಟೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ನೋಡಿ ಹೇಳಬೇಕು.

---

## Working of the Farms run by Agricultural Department.

*Q.—96. **Sri K. PUTTASWAMY** (Mandya District— General).—Will the Government be pleased to state:—

(*a*) the number of farms run by Agricultural Department and their location ;

(*b*) the result of the working for the last five years ;

(*c*) how many of them are made self-supporting ?

*A.*—**The Hon'ble Sri T. MARIAPPA** (Home Minister).—

(*a*) 1. Visvesvaraya Canal Farm near Mandya.

2. Babbur Farm near Hiriyur.

3, Hebbal Farm near Bangalore

4. Nagenahalli Paddy Breeding Station near Mysore

5. Basic Seed Farms (temporary under Post-war Development schemes one in each District).

6. Regional Farm, Haradanahalli, Chamarajanagar Taluk.

7. Regional Farm, Yelavare, Arsikere Taluk,

(*b*) *Vide* statement appended below.

(*c*) These farms are worked both on experimental and research sides. The object of these farms is research work on improved methods and practices of Agriculture and to serve as demonstration farms to the ryots.

As such the Farms are not worked as only Revenue yielding ones and so they cannot become self-supporting.

Financial Statement of working of the Departmental Farms.

| Name of the Farm | 1945—46 | | 1946—47 | | 1947—48 | |
|---|---|---|---|---|---|---|
| | Expenditure | Revenue | Expenditure | Revenue | Expenditure | Revenue |
| Babbur Farm ... ... ... | 23,137 | 6,986 | 27,158 | 14,618 | 28,099 | 3,752 |
| Nagenahally Paddy Breeding Station ... | 8,006 | 2,189 | 8,305 | 5,116 | 9,954 | 4,121 |
| Visvesvaraya Canal Farm ... ... | 68,409 | 34,787 | 79,513 | 25,864 | 97,682 | 22,444 |
| Anjanapura Farm* ... ... ... | 6,621 | 1,102 | 6,388 | 1,274 | 7,023 | 1,998 |
| Bikli Farm* ... ... ... | 3,052 | 356 | 3,630 | 1,732 | 3,068 | 2,073 |
| (*a*) Basic Farm ... ... ... | ... | ... | ... | ... | ... | ... |
| (*b*) Regional Farms ... ... ... | ... | ... | ... | ... | ... | ... |

* *Vide* Next page for foot note.

(THE HON'BLE SRI T. MARIAPPA)

| | 1948—49 | | 1949—50 (9 months) | | Remarks |
|---|---|---|---|---|---|
| | Expenditure | Revenue | Expenditure | Revenue | |
| Babbur Farm ... ... ... | 36,345 | 30,777 | 26,960 | 7,920 | Only revised estimates as audit account figures are not available. |
| Nagenahally Paddy Breeding Station ... | 16,706 | 8,687 | 4,573 | 7,040 | |
| Visvesvaraya Canal Farm ... | 1,05,410 | 43,410 | 89,630 | 71,480 | |
| Anjanapur Farm* ... ... ... | 5,402 | 4,384 | 5,200 | 1,500 | |
| Bikli Farm* ... ... ... | 4,717 | 2,038 | 2,000 | ... | |
| (a) Basic Farm ... ... ... | 93,512 | 56,950 | 70,955 | 48,329 | |
| (b) Regional Farms ... ... ... | ... | ... | ... | ... | |

*These Farms are since closed.

(a) These Farms are scheduled to be closed by July 1952.

(b) These Farms are in the formation stage and till after the period of three years is over since starting no receipts of appreciable extent could be expected.

**Sri K. PUTTASWAMY.**—In answer to question (b) you have given the revenue and the expenditure of the farms for the last five years. In answer to (c) you have said that the farms are worked on experimental and research sides. I want to know what are the results of the experiments carried out so far; what researches are made? That is the object of my question.

**The Hon'ble Sri T. MARIAPPA.**—I am afraid, Sir, the question has been misunderstood, and therefore perhaps the answer. But the question is not also very clear. The result of working would be profit or loss. Therefore, we assumed that he wanted only the result in rupees, annas and pies. If the Hon'ble Member had only made his question very clear, I would have certainly given the answer required.

**Sri A. BHEEMAPPA NAIK** (Chitaldrug District—General).—What are the researches carried out in the Babbur Farm?

**The Hon'ble Sri T. MARIAPPA.**—I want notice.

**Sri A. BHEEMAPPA NAIK.**—Did the Hon'ble Minister visit the Babbur Farm at any time?

**The Hon'ble Sri T. MARIAPPA.**—Yes, Sir, with the Hon'ble Member.

**Sri A. BHEEMAPPA NAIK.**—Was the Hon'ble Minister satisfied with the work carried out there?

**The Hon'ble Sri T. MARIAPPA.**—With regard to the inspection of that Farm I was not satisfied. But I think the Hon'ble Member will agree with me that things there have improved.

**Sri A. BHEEMAPPA NAIK.**—Will the Hon'ble Minister see that either it is closed or it is improved?

**The Hon'ble Sri T. MARIAPPA.**—Sir, all of us must try for improvement.

**Sri A. BHEEMAPPA NAIK.**—At least an investigation can be made to see whether it can be improved and whether this huge wastage every year cannot be prevented. Can that not be done?

**The Hon'ble Sri T. MARIAPPA.**—I have issued definite instructions that these things should be improved. Very recently the Government have sanctioned a Gazetted Officer so that he may put forth his best efforts to improve that Farm.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ತಾವು ಇಲ್ಲಿ ತಿಳಿಸಿರತಕ್ಕ ನಾಗೇನಹಳ್ಳಿ ಪ್ಯಾಡಿ ಬ್ರೀಡಿಂಗ್ ಫಾರಂ ಮತ್ತು ಪ್ರತಿಯೊಂದು ಜಿಲ್ಲೆಯಲ್ಲೂ ಹಂಗಾಮಿಯಾಗಿ ಜಾರಿಗೆ ತಂದಿರುವ ಈ ಫಾರಂಗಳನ್ನು 5 ವರ್ಷಗಳು ಕಳೆದನಂತರ ಇವುಗಳನ್ನೆಲ್ಲಾ ನಿಲ್ಲಿಸಿ ಬಿಡುತ್ತೀರೋ ಅಥವಾ ಅವುಗಳನ್ನು ನಂತರ ಮುಂದಕ್ಕೆ ಮುಂದುವರಿಸಬೇಕೆಂದಿದ್ದೀರೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರತಿಯೊಂದು ಜಿಲ್ಲೆಯಲ್ಲಿಯೂ, ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯ ಬಗ್ಗೆ ಏರ್ಪಡಿಸಿರತಕ್ಕ ಫಾರಂಗಳನ್ನೆಲ್ಲಾ ೫ವರ್ಷಗಳ ನಂತರ ನಿಲ್ಲಿಸಿ ಬಿಡಲಾಗುತ್ತದೆ. ಆದರೆ ನಾಗೇನಹಳ್ಳಿ ಪ್ಯಾಡಿ ಬ್ರೀಡಿಂಗ್ ಫಾರಂನ ವಿಚಾರವು ಪ್ರತ್ಯೇಕವಾಗಿ ಪರಿಶೀಲನೆ ಮಾಡತಕ್ಕದ್ದಾಗಿದೆ. ಆ ಬಾಬಿನಲ್ಲಿ ಯಾವುದು ಲಾಭದಾಯಕದಾಗಿದೆಯೋ ಅಂಥಾದ್ದನ್ನಿಟ್ಟುಕೊಂಡು ಉಳಿದ ಫಾರಂಗಳನ್ನು ಬಿಟ್ಟು ಬಿಡಲಾಗುತ್ತದೆ.

**Sri D. H. CHANDRASEKHARAIYA** (Chitaldrug District—General).—Is there no method of improving the financial working of these farms?

**The Hon'ble Sri T. MARIAPPA.**—Yes, Sir, there is a method. In fact, we are trying to prevent wastage; leakages have been prevented and as a result there is a gradual improvement in 1949, 1950 and 1951.

**Sri D. H. CHANDRASEKHARAIYA.**—Are the Government aware that in Western Countries like Denmark and Holland similar farms are working under profit?

**The Hon'ble Sri T. MARIAPPA.**—No research farms are paying anywhere in the world. It is only demonstration farms are paying. We are trying to combine both research and demonsration sides and only such farms pay,

**Sri D. H. CHANDRASEKHARAIYA.**—I do not think he has got correct information on the point, Sir. Anyway I am going to supply him with the correct information. Is it not possible for the Government to appoint an expert committee to suggest ways and means of improving the working of these farms which are now working at a huge loss?

**The Hon'ble Sri T. MARIAPPA.**—These facts have been already examined by the Departmental committee. Very recently the Department was asked to investigate these things, and as the Hon'ble Member will see, there is improvement. I can assure the Hon'ble Member that we will take all possible steps further to improve, particularly so far as the demonstration side is concerned, so that it may be self-supporting. So far as research side is concerned, inevitably we have to spend money.

**Sri D. H. CHANDRASEKHARAIYA.**—Are the Government aware that in the area near about where the Babbur Farm is working, the raiyats grow better crops and earn more than the farm?

**The Hon'ble Sri T. MARIAPPA.**—Sir, it is a hypothetical question. I do not know to which farm he is referring. There one raiyat may grow more and another less. Another thing is, it all depends upon the soil conditions also. The Babbur Farm has alluvial soil and it need not have been started there.

**Sri D. H. CHANDRASEKHARAIYA.**—Are the Government aware that the raiyats in that area obtain no useful knowledge from the farm itself?

**The Hon'ble Sri T. MARIAPPA.**—I do not think so. But we may not have come up to the standards the raiyats expect.

**Sri D. H. CHANDRASEKHARAIYA.**—Is it not a fact that the question of improving the working of the Babbur Farm is being urged on the floor of the Legislature during the past 20 years?

**The Hon'ble Sri T. MARIAPPA.**—Yes Sir, but steps also are being taken to improve the farm.

**Sri L. SIDDAPPA** (Shimoga District—General).—There was one Farm in Shikarpur Taluk, *viz.*, Anjanapur Farm. Is it closed now?

**The Hon'ble Sri T. MARIAPPA.**—Yes.

**Sri L. SIDDAPPA.**—The Government have sanctioned five regional farms but mention is made of only two, one at Yelavare and the other at Haradanahalli. Are the other three not sanctioned or has the sanction been cancelled?

**The Hon'ble Sri T. MARIAPPA.**—The Hon'ble Member will appreciate the feeling in the House that to say a taluk farm or a regional farm, would not, in the opinion of the Government, be helpful to the problem. Therefore, let us concentrate our activities on a farm and bring it up to a standard so that the raiyats may copy. It is no good expanding the activities. Therefore, we have closed the regional farms except these two farms on which we have already invested money.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—(a) ಪ್ರಶ್ನೆಯ ಉತ್ತರದಲ್ಲಿ ಬಿಕ್ಕಲ ಫಾರಂ ತೋರಿಸಿರುವುದಿಲ್ಲ. ಕಾರಣವೇನು?

**The Hon'ble Sri T. MARIAPPA.**—It is since closed Sir. We have realised that it is not going to be paying and wherever results are not promising we have closed down the farms concerned.

ಶ್ರೀ ಟಿ. ಮಾದಯ್ಯಗೌಡರು.—ಹೆಬ್ಬಾಳು ಫಾರಂನ ರಿಸಲ್ಟನ್ನು ಅಪೆಂಡಿಕ್ಸ್‌ನಲ್ಲಿ ಕೊಡದಿರುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮಗೆ ಗೊತ್ತಿರುವ ಹಾಗೆ ಅದು ಕಾಲೇಜಿಗೆ ಸೇರಿದೆ.

ಶ್ರೀ ಟಿ. ಮಾದಯ್ಯಗೌಡರು.—ಅದು ಸರ್ಕಾರದಿಂದ ನಡೆಸಲ್ಪಡುತ್ತಿದೆಯಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಕಾಲೇಜಿನವರು ನೋಡಿಕೊಳ್ಳುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಅದು ಕಾಲೇಜಿಗೆ ಸೇರಿದ್ದರೂ ಸರ್ಕಾರದವರು ಹಣ ಅದಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಅದರ ಉತ್ಪತ್ತಿಯೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಟಿ. ಮಾದಯ್ಯಗೌಡರು.—ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಅದನ್ನೂ ಒದಗಿಸಬೇಕಾಗಿತ್ತಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಕಾಲೇಜಿಗೆ ಸೇರಿರುವುದರಿಂದ ಪ್ರತ್ಯೇಕವಾಗಿ ಕೇಳಿದ್ದರೆ ಉತ್ತರ ಕೊಡುತ್ತಿದ್ದೆವು.

ಶ್ರೀ ಟಿ. ಮಾದಯ್ಯಗೌಡರು.—ಈಗ ಫಾರಂಗಳಲ್ಲಿ ಬೀಜದ ಧಾನ್ಯವನ್ನು ಉತ್ಪತ್ತಿ ಮಾಡುತ್ತಿದ್ದೀರಿ. ಅಲ್ಲಿ ಒಂದು ಪಲ್ಲ ಬೀಜದ ಬತ್ತ ಬೆಳೆಯುವುದಕ್ಕೆ ಎಷ್ಟು ಸರ್ಕಾರಕ್ಕೆ ಖರ್ಚು ಬೀಳುತ್ತದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಟಿ. ಮಾದಯ್ಯಗೌಡರು.—ಅನೇಕ ಸಂದರ್ಭಗಳಲ್ಲಿ ರೈತರು ಬೆಳೆಯುವ ಬೀಜದ ಬತ್ತವು ಸರ್ಕಾರದವರು ಕೊಡುವುದಕ್ಕಿಂತ ಉತ್ತಮವಾಗಿರುತ್ತದೆಂದು, ಅದನ್ನೇ ಕೆಲವರು ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಬೆಳೆಯುವುದು ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ಮಾರಾಟವಾಗುತ್ತಿದೆಯೆಂದು ತಮಗೇ ಗೊತ್ತು.

ಶ್ರೀ ಟಿ. ಮಾದಯ್ಯಗೌಡರು.—ಪ್ರತಿಯೊಂದು ಜಿಲ್ಲೆಯಲ್ಲೂ ತಾವು ಫಾರಂ ಬೀಜದ ಬತ್ತವನ್ನು ಹಂಚಲು ಸರಬರಾಯಿ ಮಾಡುತ್ತಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಅದರ ಅವಶ್ಯಕತೆ ಬಹಳ ಹೆಚ್ಚು. ಜೆನ್ನಾಗಿಲ್ಲದಿದ್ದರೆ ರೈತರು ಅದನ್ನು ತೆಗೆದುಕೊಳ್ಳುತ್ತಿರಲಿಲ್ಲ. ಅದು ಉತ್ತಮ ತರಹೆಯದಾದ್ದರಿಂದಲೇ ಗಿರಾಕಿ ಜೋರಾಗಿದೆ.

ಶ್ರೀ ಟಿ. ಮಾದಯ್ಯಗೌಡರು.—ಯಾವ ರೀತಿ ರೈತರು ಕೊಡುವುದು ಉತ್ತಮ ತರಹೆಯ ಬೀಜವಾಗಿ ತರುತ್ತದೆಂಬುದನ್ನು ಕಂಡು ಹಿಡಿದು ಅಂಥಾದ್ದನ್ನು ಬೆಳೆಸುವುದಕ್ಕೆ ಪ್ರಯತ್ನ ಪಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಯತ್ನ ಮಾಡುತ್ತೇವೆ. ಈಗ ಬೇಸಿಕ್ ಫಾರಂ ಇಲ್ಲದ್ದರಿಂದ ಬೀಜವನ್ನು ರೈತರಿಗೆ ಹಂಚಿ ಅವರಿಗೆ ಸಬ್‌ವೆಷನ್ ಕೊಟ್ಟು ಬೆಳೆಸಿ ಬೇಕಾದವರಿಗೆ ಹಂಚುತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಬಬ್ಬೂರು ಫಾರಂನಲ್ಲಿ ಏನು ಕಾರ್ಯಕ್ರಮ ನಡೆಯುತ್ತಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ತೆಂಗಿನ ಸೊಸಿಗಳನ್ನು ಬೆಳೆಸುವುದು ಮತ್ತು ಇತರ ವಿಧವಾದ ಇಕ್ವೆಸ್ಟಿಗೇಷ್ಟ್ ಕೆಲಸಗಳು ನಡೆಯುತ್ತಿವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗ cocoanut nursery ಯು ಲಾಭದಾಯಕವಾಗಿ ಕೆಲಸ ಮಾಡುತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದರಿಂದ ಬರುತ್ತಿರುವ ಉತ್ಪತ್ತಿಯನ್ನು ನೋಡಿದರೆ ನಿಜವಾಗಿಯೂ ನಮಗೆ ಸ್ವಲ್ಪ ಹಣ ಬರುತ್ತಿದೆಯೆಂದು ಹೇಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—Cocoanut nursery ಯು ಆದಾಯದಾಯಕವಾಗಿ ಕೆಲಸ ಮಾಡುತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೊಂದು ಐಟಂ ಮಾತ್ರ ತೆಗೆದುಕೊಂಡರೆ ಲಾಭದಾಯಕವಾಗಿದೆಯೆಂದು ಹೇಳಬಹುದು. ತೆಂಗಿನಕಾಯಿ ಬೆಲೆ ಹೆಚ್ಚಾದ್ದರಿಂದ ಸ್ವಲ್ಪ ಉತ್ಪತ್ತಿ ಬಂದಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಬೇಸಿಕ್ ಫಾರಂನ ಕಾರ್ಯಕಲಾಪಗಳೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—I have already answered that question. ಬೇಸಿಕ್ ಫಾರಂನಲ್ಲಿ ಬೆಳೆದ ಬತ್ತವನ್ನು ರೈತರಿಗೆ ಹಂಚಿ ಹೆಚ್ಚಾಗಿ ಬೀಜದ ಬತ್ತವನ್ನು ತಯಾರಿಸಿ ಹಂಚಿ ಲಾಭದಾಯಕವಾಗಿ ಬೆಳೆ ಮಾಡಲು ಅವಕಾಶ ಮಾಡುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಫಾರಂನಲ್ಲಿ ಏನೇನು ಕಾರ್ಯಕ್ರಮ ನಡೆಯುತ್ತಿದೆಯೆಂಬುದಕ್ಕೆ ವರದಿಯನ್ನು ತರಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತರಿಸಿದೆ. ಅಲ್ಲಿನ ಕಾರ್ಯಕ್ರಮಗಳನ್ನು ಪರಿಶೀಲಿಸಿ ಕೆಲವು ಫಾರಂ ಕ್ಷೇತ್ರಗಳನ್ನು ಈಚೆಗೆ ಮುಚ್ಚಿರಾಗಿದೆ. ಹೆಚ್ಚಾಗಿದ್ದ ಸಿಬ್ಬಂದಿಯನ್ನು ಕಡಿಮೆ ಮಾಡಿದೆ. ಕೆಲಸದಲ್ಲಿ ಅನುಭವ ಪಡೆದಿರುವವರನ್ನು ಮಾತ್ರ ಇಟ್ಟುಕೊಂಡು ಎಷ್ಟೋ ವಿಧದಲ್ಲಿ ಅಲ್ಲಿನ ಆಡಳಿತವನ್ನು ಉತ್ತಮ ಪಡಿಸಿರುವುದರಿಂದ ಇತ್ತೀಚೆಗೆ ಆದಾಯ ಬರುತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅಲ್ಲಿ ಹಣ ದುರುಪಯೋಗವಾಗಿದೆಯೆಂಬುದಕ್ಕೆ ಉದಾಹರಣೆಗಳೇನಾದರೂ ಇವೆಯೆ?

**The Hon'ble Sri T. MARIAPPA.**—It does not arise out of this question.

ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು (ಮೈಸೂರು ಜಿಲ್ಲೆ).—ಈ ಬೇಸಿಕ್ ಫಾರಂಗಳಲ್ಲಿ ಸರ್ಕಾರದವರೇ ಜಮೀನನ್ನು ಉಳುಮೆ ಮಾಡಿಸಿ, ಬಿತ್ತನೆ ಮಾಡಿ ಬತ್ತವನ್ನು ರೈತರಿಗೆ ಹಂಚುತ್ತಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಸರ್ಕಾರದವರೇ ಕೂಲಿಯಿಟ್ಟು ವ್ಯವಸಾಯ ಮಾಡಿಸಿ ಬತ್ತ ಬೆಳೆಸುತ್ತಿದ್ದಾರೆ.

ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು.—ಸರ್ಕಾರದ ಜೊತೆಗೆ ರೈತರ ಸಹಾಯವನ್ನು ತೆಗೆದುಕೊಂಡು ಬೆಳೆಯುತ್ತಾರೆಯೋ ಅಥವಾ ಅವರೇ ಪೂರ್ಣವಾಗಿ ಎಲ್ಲವನ್ನೂ ಮಾಡುತ್ತಾರೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರದವರು ಬೆಳೆದು ರೈತರಿಗೆ ಹಂಚಿ ಅವರಿಂದಲೂ ಬೆಳೆಸಿ ಅದಕ್ಕೆ ತಕ್ಕ ಪರಿಹಾರ ಕೊಡುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಈ ಫಾರಂಗಳಲ್ಲಿ ಬೆಳೆಯುವುದನ್ನು ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರು ಮತ್ತು ಫೀಲ್ಡ್‌ಮೆನ್‌ಗಳು ಹೋಗಿ ಆಜ್ಮಾಯಿಷಿ ಮಾಡಿ ಹಳ್ಳಿಗಳಲ್ಲಿ ಹಂಚುವುದು ಸರಿಯಾಗಿ ನಡೆಯುತ್ತಿದೆಯೇ ಎಂಬುದನ್ನು ಪರಿಶೀಲಿಸುತ್ತಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ರೈತರು ವ್ಯವಸಾಯ ಮಾಡುವ ಜಮೀನನ್ನು ವ್ಯವಸಾಯದ ಇಲಾಖೆಯ ಇನ್‌ಸ್ಪೆಕ್ಟರು ಅಥವಾ ಫೀಲ್ಡ್‌ಮೆನ್‌ಗಳು ಹೋಗಿ ನೋಡಬೇಕೆಂದಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಸುಮಾರು 30 ಪಲ್ಲ ಬೀಜದ ಬತ್ತ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Mr. SPEAKER.—That does not arise.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಈ ಫಾರಂಗಳನ್ನು ಸ್ಥಾಪಿಸುವ ಉದ್ದೇಶವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದೊಂದರ ಉದ್ದೇಶ ಒಂದೊಂದು ತರಹ ಇದೆ. ನಾಗೇನಹಳ್ಳಿಯಲ್ಲಿ ಬತ್ತ ಬೆಳೆಯುತ್ತಾರೆ, ಬಬ್ಬೂರು ಫಾರಂನಲ್ಲಿ ಎಣ್ಣೆ ಬೀಜ ಬೆಳೆಯುತ್ತಾರೆ. Particularly Chitaldrug District is known for oil seeds. ಎಲ್ಲೆಲ್ಲಿ ಯಾವ್ಯಾವುದನ್ನು ಸಾಧ್ಯವಾದ ಮಟ್ಟಿಗೆ ನಿರ್ಧರಿಸಿ ಜನರಿಗೆ ಅನುಕೂಲಪಡಿಸಬೇಕೆಂಬುದೇ ಮುಖ್ಯ ಉದ್ದೇಶ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಒಳ್ಳೆಯ ಎಣ್ಣೆಯ ಬೀಜಗಳನ್ನು ಎಲ್ಲಿ ಬೆಳೆಯಬಹುದೆಂಬುದನ್ನು ಪರಿಶೀಲಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು,—ಹಾಸನ ಜಿಲ್ಲೆಯಲ್ಲಿ castor seeds ಬೆಳೆಯಬಹುದು. ಅಲ್ಲಿ ಅದನ್ನು ಹಂಡೆರಾಗಿದೆ. Results are very promising.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹೆಬ್ಬಾಳ್ ಫಾರಂ ಪರೀಕ್ಷಾ ಕ್ಷೇತ್ರ—ಅಲ್ಲಿ ಕಾರ್ಪೊರೇಜಿಗೆ ಅದು ಸೇರಿದೆ ಎಂದು ಹೇಳುತ್ತೀರಿ. ಆದರೆ ಅಲ್ಲಿಗೆ ಅಷ್ಟು ಸಿಬ್ಬಂದಿ ಕೊಡುವಾಗ ಹೆಚ್ಚು ಆದಾಯ ಬರುವಂತೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದರಲ್ಲಿ research, ಮತ್ತು demonstration ಎಂಬ ಎರಡು ಭಾಗವಿದೆ. ಅಲ್ಲಿ ಪ್ರಯೋಗ ಮಾಡಿ ಅದರ ಫಲತಾಂಶವನ್ನು ಸಾರ್ವಜನಿಕರಿಗೆ ತಿಳಿಸಿ ಅವರಿಗೆ ಅನುಕೂಲ ಪಡಿಸಬೇಕಾದ್ದು ಅದರ ಉದ್ದೇಶ. ಆದ್ದರಿಂದ ಅಷ್ಟಾಗಿ ಲಾಭ ಬರಬೇಕೆಂದು ಹೇಳುವುದು ಸರಿಯಲ್ಲ.

Sri M. GOVINDA REDDY (Chitaldrug District-General).—Are not these more demonstrative farms than research farms?

The Hon'ble Sri T. MARIAPPA.—Partly demonstrative and partly research.

Sri M. GOVINDA REDDY.—Are there purely demonstrative farms and purely research farms?

The Hon'ble Sri T. MARIAPPA.—No. For example at Babbur Farm they have conducted research in oil seeds—to study whether a particular variety will thrive in that soil or not. Originally it was a research station for cocoanut. It is now demonstration station also.

Sri M. GOVINDA REDDY.—To what extent they are demonstrative? Are they demonstrative from the point of view of cost of running the farm or from the point of view of growing more food?

The Hon'ble Sri T. MARIAPPA.—Sir, these farms should not be linked up with growing more food. They are meant for a specific purpose.

Sri M. GOVINDA REDDY.—To the extent they are demonstrative, are they demonstrative from the point of view of economy?

The Hon'ble Sri T. MARIAPPA.—They ought to be so.

Sri M. GOVINDA REDDY.—But have the Government tabulated the relative costs of cultivation to know whether it is costing the Government more than what it would cost an ordinary raiyat or whether it costs them less?

The Hon'ble Sri T. MARIAPPA.—I want notice to say whether this question has been examined in all its details. We have to pay proportionate overhead charges. That is the difficulty with regard to Government concerns.

Sri M. GOVINDA REDDY.—Has it come to the notice of the Government that the cost of running these farms will be at least double the cost of cultivation in a raiyat's farm?

The Hon'ble Sri T. MARIAPPA.—Not exactly double. But it is costlier than a raiyat's farm.

Sri M. GOVINDA REDDY.—From that point of view, is it not discouraging to the raiyat?

The Hon'ble Sri T. MARIAPPA.—No, we have produced a very beautiful variety of sugarcane. It is very popular. We have produced a thornless variety of castor seed which is very popular in Hassan District. Similarly, we have just replaced *Coimbatore Sanna* by another type of paddy which is very popular even in the Malnad.

Sri M. GOVINDA REDDY.—I was not referring to the strains of paddy at all. They might have introduced new

(SRI M. GOVINDA REDDY.)

strains of paddy. But from the point of view of running costs.....

**The Hon'ble Sri T. MARIAPPA.**—These strains were evolved as a result of patient and laborious research work spread over a number of years. Now that the strains have been evolved, the raiyats can now take them over for cultivation. There is no question of comparison between the two. The raiyat may rare his foodgrains most economically. But by his side another raiyat may spend more and get less. It all depends upon the way in which the resources are husbanded and the farm is run.

**Sri M. GOVINDA REDDY.**—May I know the percentage of raiyats who have been benefited by this research work?

**The Hon'ble Sri T. MARIAPPA.**—The very object of running the Station is to benefit the raiyats. I can give you many instances.

**Sri M. GOVINDA REDDY.**—What are the results obtained at the Babbur research station in oil-seeds?

**The Hon'ble Sri T. MARIAPPA.**—So far as Babbur is concerned Sir, I have already answered Sri A. Bheemappa Naik. I think it must satisfy him. We have now put it on a better footing. The results hereafter are bound to improve. If the results are really disappointing, we will take steps to see that the results are commensurate with the money spent.

**Sri M. GOVINDA REDDY.**—I do not want to cast any reflection. I just want to know whether they have achieved any results.

**The Hon'ble Sri T. MARIAPPA.**—Certainly, if the Babbur Farm had not been started, cocoanut plantation would not have spread under the Vani Vilas Sagar in the manner in which it has spread now.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಚಾಮರಾಜನಗರ ತಾಲ್ಲೂಕಿನ ಹರದನಹಳ್ಳಿಯಲ್ಲಿರುವ ಪ್ರಾದೇಶಿಕ ಕ್ಷೇತ್ರವು ಈಗ ಕೆಲಸ ಮಾಡುತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಅಲ್ಲಿ ಕಟ್ಟಡ ತಯಾರಾಗಿ ಬಾವಿ ತೆಗೆಯಬೇಕು. ಅದನ್ನು ಮಾಡುತ್ತೇವೆ, ಮುಂದೆ ಕೆಲಸ ನಡೆಯಬೇಕು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಯಾವಾಗ ಇದು ಪ್ರಾರಂಭವಾಯಿತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ರೀಜನಲ್ ಫಾರಂಗಳ ಕೆಲಸ ಏನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹತ್ತಿ, ಹರಳು ಮತ್ತು ಜೋಳ ಈ ಮೂರನ್ನೂ ಅಭಿವೃದ್ಧಿ ಮಾಡಲು ತಕ್ಕ ಪ್ರಯೋಗ ನಡೆಸಿ ಅದರಿಂದ ಜನಗಳಿಗೆ ಅನುಕೂಲ ಮಾಡಲು ಸಾಧ್ಯವೇ ಎಂಬುದನ್ನು ಇಲ್ಲಿ ಪರಿಶೀಲನ ಆಗುತ್ತದೆ. ಹರದನಹಳ್ಳಿ ರೀಜನಲ್ ಫಾರಂ ಇಷ್ಟರಲ್ಲೇ ಪ್ರಾರಂಭವಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಎಷ್ಟು ದಿನದಲ್ಲಿ ಪ್ರಾರಂಭವಾಗುತ್ತದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವರ್ಷದಿಂದ ಅಲ್ಲಿಯ ಕೆಲಸ ಕಾರ್ಯಗಳು ಪ್ರಾರಂಭವಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಾಗೇನಹಳ್ಳಿ ಪ್ಯಾಡಿ ಬ್ರೀಡಿಂಗ್ ಸ್ಟೇಷನ್‌ನಲ್ಲಿ ಏನು ಕೆಲಸ ಆಗುತ್ತಾ ಇದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಉತ್ತರದಲ್ಲೇ ಹೇಳಿದೆ; ಪ್ಯಾಡಿ ಬ್ರೀಡಿಂಗ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ಒಳ್ಳೆಯ ಬೀಜದ ಬತ್ತ ನರಬರಾಯು ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. It is 'ratnachudi'. More than 60 per cent of the area is going to be under 'ratnachudi'.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ರಿಸರ್ಚ್ ಇನ್‌ಸ್ಟಿಟ್ಯೂಟ್ ಪ್ರಾರಂಭ ಮಾಡುವುದಕ್ಕೆ ಮುಂಚೆ ಬೀಜದ ಬತ್ತ ಇರಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರತ್ನಚೂಡಿ ಇರಲೇ ಇಲ್ಲ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಬಬ್ಬೂರ್ ಫಾರಂನಲ್ಲಿ 1946-47ಕ್ಕೆ 14,618 ರೂಪಾಯಿ, 1947-48ಕ್ಕೆ 3,752 ರೂಪಾಯಿ ಆದಾಯ ಬಂದಿದೆ. 1947—48 ರಲ್ಲಿ ಅಷ್ಟು ಕಮ್ಮಿ ಆದಾಯ ಬರುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಬಿ. ಚನ್ನಬೈರೇಗೌಡರು:—ಅದೇ 1948-49 ರಲ್ಲಿ 30,777 ರೂಪಾಯಿ ಆದಾಯ ಬಂದಿದೆ. ಎಂದರೆ 1947ರಲ್ಲಿ ಈ ಫಾರಂನವರೂ ಕೂಡ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರೆಂದು ಭಾವಿಸಬಹುದೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Receipts delay ಆಗಿ ಬಂದಿರಬಹುದು. 1948-49 ರಲ್ಲಿ 36,345 ರೂಪಾಯಿ ಖರ್ಚು; 30,777 ರೂಪಾಯಿ ಆದಾಯ; 1947-48 ರಲ್ಲಿ ಖರ್ಚು 28,099 ರೂಪಾಯಿ, 3,752 ರೂಪಾಯಿ ಆದಾಯ ಎಂದು ತೋರಿಸಲಾಗಿದೆ. ಎಂದರೆ 49 ರಲ್ಲಿ ಆದಾಯ ಹೆಚ್ಚಾಗಿ ತೋರಿಸಿರುವುದನ್ನು ನೋಡಿದರೆ receipts delay ಆಗಿ ಬಂದಿರಬಹುದೆಂದು ಕಾಣುತ್ತದೆ. ಕಾಲಾವಕಾಶ ಕೊಟ್ಟರೆ ನೋಡಿ ಹೇಳುತ್ತೇನೆ.

**Mr. SPEAKER.**—Next question. Sri M. C. Sivananda Sharma.